ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಹಾಸನ
ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಪದ್ಮಶ್ರೀ ಕಮರ್ಷಿಯಲ್ ಕಾಂಪ್ಲೆಕ್ಸ್ , ಹೋಟೆಲ್ ಪಾಲಿಕ ಹತ್ತಿರ, ಆರ್.ಸಿ.ರೋಡ್, ಹಾಸನ-573201
E-Mail:dobcmhassan@gmail.com ☎ Fax/Phone No:08172-268372

ಸಂಖ್ಯೆ:ಹಿಂವಕಇ/ಸಿಬ್ಬಂದಿ-03/ಡಿ-ಗ್ರೂಪ್‌ನೇ.ನೇ-1/2016-17 ದಿನಾಂಕ:11-10-2017

# ಪ್ರಕಟಣೆ

ವಿಷಯ:- ಹಾಸನ ಜಿಲ್ಲೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಗ್ರೂಪ್-ಡಿ ವೃಂದದ ಅಡುಗೆ ಸಹಾಯಕರ ಹುದ್ದೆಯ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸುವ ಕುರಿತು

ಉಲ್ಲೇಖ:-
1. ಈ ಕಛೇರಿಯ ಪರಿಷ್ಕೃತ ತಾತ್ಕಲಿಕ ಆಯ್ಕೆ ಪಟ್ಟಿ ಪ್ರಕಟಿತ ಪತ್ರ ಸಂಖ್ಯೆ:ಹಿಂವಕಇ/ಸಿಬ್ಬಂದಿ-03/ಡಿ-ಗ್ರೂಪ್‌ನೇ.ನೇ-1/2016-17. ದಿ:18-08-2017.
2. ಜಿಲ್ಲಾ ನೇಮಕಾತಿ ಸಮಿತಿ, ಹಾಸನ ಇವರ ಸಭಾ ನಡವಳಿ ದಿ:22-09-2017.
3. ಸರ್ಕಾರದ ಆದೇಶದ ಸಂಖ್ಯೆ:ಹಿಂವಕ/375/ಬಿ.ಇ.ಟಿ/2017 ದಿನಾಂಕ:07-08-2017.
4. ಮಾನ್ಯ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಪತ್ರ ಸಂಖ್ಯೆ:ಹಿಂವಕಇ/ಸಿಬ್ಬಂದಿ-4/ಸಿಆರ್-8/2015-16 ದಿನಾಂಕ: 17-08-2017.

*********

ಉಲ್ಲೇಖ (1)ರಲ್ಲಿ ಪ್ರಕಟಿಸಲಾದ ಅಡುಗೆ ಸಹಾಯಕರ ಹುದ್ದೆಯ ಪರಿಷ್ಕೃತ ತಾತ್ಕಲಿಕ ಆಯ್ಕೆಪಟ್ಟಿಗೆ ಯಾವುದೆ ಆಕ್ಷೇಪಣೆ ಸ್ವೀಕೃತವಾಗಿಲ್ಲದಿರುವ ಹಿನ್ನಲೆಯಲ್ಲಿ ಉಲ್ಲೇಖ (2)ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ, ಜಿಲ್ಲಾ ಮಟ್ಟದ ನೇರ ನೇಮಕಾತಿ ಸಮಿತಿ ಸಭೆಯಲ್ಲಿ, ಅಡುಗೆ ಸಹಾಯಕರ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧವಾಗಿ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲು ಸಮಿತಿಯಲ್ಲಿ ಸ್ಥೂಲವಾಗಿ ಚರ್ಚಿಸಿ, ಅಡುಗೆ ಸಹಾಯಕರ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲು ಸಮಿತಿಯು ತೀರ್ಮಾನಿಸಿದ ಮೇರೆಗೆ ಅಡುಗೆ ಸಹಾಯಕರ ಅಂತಿಮ ಆಯ್ಕೆಪಟ್ಟಿಯನ್ನು ಜಿಲ್ಲಾಧಿಕಾರಿಗಳ ಜಾಲತಾಣ http://hassan.nic.in ಪ್ರಕಟಿಸಲಾಗಿರುತ್ತದೆ.

ಮುಂದುವರಿದು ಉಲ್ಲೇಖ (3)ರಂತೆ ಅಡುಗೆ ಸಹಾಯಕರ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆಯನ್ನು ದಿನಾಂಕ: 27-10-2017ರಂದು ಬೆಳಿಗ್ಗೆ 11.00 ಗಂಟೆಯಿಂದ 5.00 ರವರೆಗೆ ಡಾ. ಬಿ.ಆರ್ ಅಂಬೇಡ್ಕರ್ ಭವನ, ಹರ್ಷಮಹಲ್ ರಸ್ತೆ, ಹಾಸನ ಇಲ್ಲಿ ನಡೆಸಲಾಗುವುದು. ಆದ್ದರಿಂದ ಆಯ್ಕೆಯಾಗಿರುವ ಅಭ್ಯರ್ಥಿಗಳು ಸದರಿ ದಿನದಂದು ಕಡ್ಡಾಯವಾಗಿ ಹಾಜರಾಗಿ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಹಾಜರುಪಡಿಸತಕ್ಕದ್ದು. ಒಂದು ವೇಳೆ ಸದರಿ ದಿನದಂದು ನಿಗಧಿತ ಸಮಯದೊಳಗೆ ಮೂಲ ದಾಖಲೆಗಳೊಂದಿಗೆ ಹಾಜರಾಗದೆ ಇದ್ದಲ್ಲಿ, ಅಂಥವರಿಗೆ ಯಾವುದೆ ಮೂನ್ಸೂಚನೆ ನೀಡದೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

**ಪರಿಶೀಲನಾ ಸಮಯದಲ್ಲಿ ಅಭ್ಯರ್ಥಿಗಳು ಹಾಜರು ಪಡಿಸಬೇಕಾದ ಮೂಲ ದಾಖಲೆಗಳು ಈ ಕೆಳಗಿನಂತಿವೆ.**

1) ಹುದ್ದೆಗಳಿಗೆ ನಿಗದಿಪಡಿಸಲಾಗಿರುವ ವಿದ್ಯಾರ್ಹತೆಯಾದ ಎಸ್,ಎಸ್.ಎಲ್.ಸಿ ಅಂಕಪಟ್ಟಿ ಅಥವಾ ತತ್ಸಮಾನ ವಿದ್ಯಾರ್ಹತೆಯ ಅಂಕಪಟ್ಟಿಗಳು.(ನೇಮಕಾತಿ ಅಧಿಸೂಚನೆಯಲ್ಲಿ ಸೂಚಿಸಿರುವಂತೆ)
2) ವಯಸ್ಸಿನ ಬಗ್ಗೆ ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್,ಎಸ್.ಎಲ್.ಸಿ ಅಂಕಪಟ್ಟಿ ಅಥವಾ ತತ್ಸಮಾನ ಪರೀಕ್ಷೆಯ

ಮಾಣ ಪತ್ರ/ವರ್ಗಾವಣೆಯ ಪ್ರಮಾಣ ಪತ್ರ (ಟಿ.ಸಿ)/ಜನ್ಮ ದಿನಾಂಕವನ್ನು ತೋರಿಸುವಂತೆ ಶಾಲಾ ದಾಖಲೆಯ ಉದ್ಧೃತಭಾಗ.

3) ಜಾತಿಯ ಮತ್ತು ಆದಾಯದ ಬಗ್ಗೆ ಮೀಸಲಾತಿ ಕೋರಿರುವ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಗಧಿತ ನಮೂನೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರ ಹಾಜರುಪಡಿಸುವುದು.
4) ಗ್ರಾಮೀಣ ಮೀಸಲಾತಿ ಹಾಗೂ ಕನ್ನಡ ಮಾಧ್ಯಮ ಮೀಸಲಾತಿ ಕೋರಿರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರಗಳನ್ನು ಹಾಜರುಪಡಿಸಬೇಕು.
5) ಅಂಗವಿಕಲ ಮೀಸಲಾತಿ ಕೋರಿರುವ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಮೂಲ ಪ್ರಮಾಣ ಪತ್ರಗಳನ್ನು ಹಾಜರಿಪಡಿಸಬೇಕು.
6) ಮಾಜಿ ಸೈನಿಕರ ಮೀಸಲಾತಿ ಬಯಸಿದಲ್ಲಿ ಅಭ್ಯರ್ಥಿಗಳು ಸೈನಿಕ ಸೇವೆಯಲ್ಲಿ ಬಿಡುಗಡೆಯಾದ/ಮುಕ್ತಿಹೊಂದಿದ ಬಗೆಗಿನ ಪ್ರಮಾಣ ಪತ್ರ ಹಾಜರುಪಡಿಸಬೇಕು.
7) ಯೋಜನಾ ನಿರಾಶ್ರಿತ ಮೀಸಲಾತಿ ಬಯಸಿದಲ್ಲಿ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರ ಹಾಜರಿಪಡಿಸಬೇಕು.
8) ಸರ್ಕಾರಿ ಸೇವೆಯಲ್ಲಿರುವವರು (ರಾಜ್ಯ/ಕೇಂದ್ರ) ಸಂಬಂಧ ಪಟ್ಟ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ ಪಡೆದ (ಎನ್.ಒ.ಸಿ) ಮೂಲ ಪ್ರಮಾಣ ಪತ್ರ ಹಾಜರಿಪಡಿಸಬೇಕು.
9) ಮೀಸಲಾತಿಗೆ ಸಂಬಂಧಿಸಿದಂತೆ ಅರ್ಜಿ ಹಾಕುವ ಸಮಯದಲ್ಲಿ ಅಪ್‌ಲೋಡ್ ಮಾಡಿರುವ ಇತರೆ ದಾಖಲೆಗಳು.

ಸದಸ್ಯ ಕಾರ್ಯದರ್ಶಿ ಹಾಗೂ
ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ
ನೇರನೇಮಕಾತಿ ಸಮಿತಿ, ಹಾಸನ ಜಿಲ್ಲೆ. ಹಾಸನ.